Sri SANJEEVANATHA AIKALA.—Is it not a fact that some of these displaced persons have occupied land in Hampi and Hampasgar area ?

ಶ್ರೀ ಎಸ್. ನಿಜಲಿಂಗಪ್ಪ.—ಇದು ಮಾನ್ಯ ಸದಸ್ಯರು ಊಹೆಯ ಮೇರೆ ಕೇಳುವ ಪ್ರಶ್ನೆ.

Facilities provided for the rehabilitation of the villagers.

*Q.—353. Sri VEERABHADRAPPA ERAPPA (Yelburga).—

Will the Government be pleased to state :—

(*a*) the facilities provided for the rehabilitation of the people of the villages that have been submerged under Tungabhadra Reservoir in Koppal Taluk ;

(*b*) the arrangements made by them in respect of people living in rehabilitated villages who have lost all their lands except houses ?

*A.—Sri S. NIJALINGAPPA (Chief Minister).—

(*a*) 1 Payment of compensation for lands and houses submerged.
2 Formation of rehabilitation centres.
3 Grant of house sites ; and manure pits free of cost.
4 Allotment of lands.
5 Grant of Rs. 300 per family in deserving cases.
6 Construction of the huts free of cost.
7 Grant of house building Taccavi.
8 Free transport facilities for shifting to rehabilitation centres.
9 Construction of religious buildings in rehabilitation centrs.
10 Construction of schools.
11 Construction of Village Panchayat Halls.
12 Construction of Internal and approach roads in rehabilitation centres.
13 Provision of drinking water wells in rehabilitation centres.
14 Construction of Sabha Mantaps.
15 Grant of land Development Taccavi.
16 Electrification of rehabilitation centres.

(*b*) Lands have been acquired and allotted to such persons instead of acquiring their houses. Only in Katarki village compensation is being paid for five houses as the lands of the owners have been acquired.

ಶ್ರೀ ವೀರಭದ್ರಪ್ಪ ಈರಪ್ಪ.—ಪುನರ್ವಸತಿಯ ಗ್ರಾಮಗಳಲ್ಲಿರುವ ರೈತರಿಗಾಗಿ ಲಘ್ಪ್ ಇರಿಗೇಷನ್ನು ಬಗ್ಗೆ ನೀರಾವರಿ ಬಾವಿಗಳನ್ನು ನೀರಾವರಿಗಾಗಿ ತೆಗೆಸಿ ಕೊಡಲು ಸರ್ಕಾರ ಏನಾದರೂ ಮುಂದೆ ಬಂದು ಸಹಾಯ ಮಾಡುತ್ತಿದ್ದಾರೆಯೇ ?

ಶ್ರೀ ಎಸ್. ನಿಜಲಿಂಗಪ್ಪ.—ಫೋರ್‌ಷೋರ್ (Foreshore) ಇರತಕ್ಕ ರೈತರು ನಮಗೆ ಬಾವಿಗಳನ್ನು ತೆಗೆಸಿಕೊಡಬೇಕೆಂದು ಕೇಳಿದ್ದಾರೆ. ಅದು ಸರಕಾರದ ಪರ್ಯಾಲೋಚನೆಯಲ್ಲಿದೆ. ಇದಕ್ಕಾಗಿ ಒಂದು ಯೋಜನೆಯನ್ನು ತಯಾರು ಮಾಡಿದ್ದೇವೆ.

ಶ್ರೀ ವೀರಭದ್ರಪ್ಪ ಈರಪ್ಪ.—ಪುನರ್ವಸತಿ ಗ್ರಾಮುಗಳಲ್ಲಿ ಮಠ, ದೇವಾಲಯ, ಮಸೀದಿ ಮುಂತಾದ ಧಾರ್ಮಿಕಸಂಸ್ಥೆಗಳ ಹಣವನ್ನು ಸರಿಯಾಗಿ ಉಪಯೋಗ ಮಾಡುತ್ತಿಲ್ಲವೆಂದು ದೂರು ಬಂದಿದೆಯೇ ?

ಶ್ರೀ ಎಸ್. ನಿಜಲಿಂಗಪ್ಪ.—ಬಂದಿಲ್ಲ. ಹೆಚ್ಚಿನ ರೀತಿಯಲ್ಲಿ ಏನಾದರೂ ಸಹಾಯ ಮಾಡಬೇಕೆಂಬ ಕೋರಿಕೆ ಬಂದರೆ ಸಹಾನುಭೂತಿಯಿಂದ ಪರಿಶೀಲಿಸುತ್ತೇವೆ.

ಶ್ರೀ ಸಿ. ಆರ್. ರಂಗೇಗೌಡ.—ಮನೆ ಮಠ ಕಳೆದುಕೊಂಡಿರುವವರಿಗೆ ಅನುಕೂಲ ಮಾಡಿಕೊಟ್ಟಿದ್ದೀರಿ. ಆದರೆ ಆ ಗ್ರಾಮಗಳಲ್ಲಿ ಮನೆ ಮಠ ಏನೂ ಇಲ್ಲದೆ ವ್ಯವಸಾಯ ಮಾಡಿ ಕೂಲ ಮಾಡುವವರಿಗೆ ಏಕೆ ವ್ಯತ್ಯಾಸ ಮಾಡಿದ್ದೀರಿ ?

ಶ್ರೀ ಎಸ್. ನಿಜಲಿಂಗಪ್ಪ.—ಕಷ್ಟವಿರುವುದನ್ನು ಗಮನಕ್ಕೆ ತಂದರೆ ಯೋಚನೆ ಮಾಡುತ್ತೇವೆ.

Sri SANJEEVANATH AIKALA.—May I know whether it is not a fact that a large number of workers who were drafted for the work of construction of the Tungabhadra Dam after completion of the Work occupied the lands at Hampi and Pampasagar round about Kampli without proper allotment of the lands to them ?

ಶ್ರೀ ಎಸ್. ನಿಜಲಿಂಗಪ್ಪ.—ಅಂಥ ದೂರು ಏನೂ ಬಂದಿಲ್ಲ.

Sri N. O. SAMAJI.—(put a supplementary in Marathi).

ಶ್ರೀ ಎಸ್. ನಿಜಲಿಂಗಪ್ಪ.—ಎಲ್ಲಿ ಜನರಿಗೆ ಸೇರಿದ ಮನೆ ಮತ್ತು ಜಮೀನು ಮುಳುಗಡೆಯಾಗಿದೆಯೋ ಅಲ್ಲಿ ಸಾಕಷ್ಟು ಪರಿಹಾರ ಕೊಡುತ್ತೇವೆ.

Grant of Land in Kolar District.

*Q.—375. Sri P. VENKATAGIRIYAPPA (Kolar).—

Will the Government be pleased to state :—

(*a*) the number of persons and the extent of land granted in Kolar District for the last three years ;

(*b*) whether they are aware that grants have been made in favour of sufficient holders in violation of land grant rules ;

(*c*) if so, what action Government have taken in the matter ?

A.—Sri M. V. KRISHNAPPA (Minister for Revenue).—

(*a*)—	*Year*	*No. of persons*	*Extent* A G
	1962-63	2,050	5,372-30
	1963-64	2,334	5,426-10
	1964-65	2,065	4,668-28

(*b*) No.

(*c*) Does not arise in view of reply to clause (*b*).

ಶ್ರೀ ಪಿ. ವೆಂಕಟಗಿರಿಯಪ್ಪ.—ನಿಯಮಾವಳಿಗೆ ವಿರುದ್ಧವಾಗಿ ಸಾಕಷ್ಟು ಜಮೀನು ಹೊಂದಿರುವವರಿಗೆ ಜಮೀನನ್ನು ಕೊಟ್ಟಿರುವುದು ಗೊತ್ತಿಲ್ಲವೆಂದು ಉತ್ತರದಲ್ಲಿ ಹೇಳಿದೆ. ಹಾಗೆ ಕೊಟ್ಟಿರುವುದನ್ನು ಗಮನಕ್ಕೆ ತಂದರೆ ಅದನ್ನು ವಜಾ ಮಾಡುತ್ತೀರಾ ?